



## ನಕ್ಕುಬಿಡಿ

ಗೆಳೆಯ: ಏನಯ್ಯಾ ನಿನ್ನ ಮಗ ದೊಡ್ಡವನಾದ ಮೇಲೆ ಏನಾಗಬಹುದು ಅಂತ ಅಂದು ಕೊಂಡಿದ್ದೀಯಾ?

ಗುಂಡ: ನಿಸ್ಸಂದೇಹವಾಗಿ ಡಾಕ್ಟರ್.

ಗೆಳೆಯ: ಅದು ಹೇಗೆ ಹೇಳ್ತೀಯಾ?

ಗುಂಡ: ಈಗಲೇ ಅವನ ಕೈ ಬರಹವನ್ನು ಯಾರಿಂದಲೂ ಓದುವುದಕ್ಕೆ ಸಾಧ್ಯವಾಗ್ತಾ ಇಲ್ಲ.

★★★

ಹೆಂಡತಿ: ರೀ ಮನೆಯ ಮೇಲೆ ಕೂತ್ಕೊಂಡು ಕಾಗೆ ಒಂದೇ ಸಮನೆ ಕೂಗ್ತಾ ಇದೆ.

ಗುಂಡ: ಹೌದು ಕಣೆ! ಐದಾರು ಸಲ ಓಡಿಸಿದರೂ ಮತ್ತೆ ಮತ್ತೆ ಬಂದು ಕೂಗ್ತಾ ಇರೋದು ನೋಡಿದರೆ ಯಾರೋ ನೆಂಟರು ನಮ್ಮ ಮನೆಗೆ ಬರ್ತಾರೆ ಅನ್ನಿಸ್ತಾ ಇದೆ.

ಹೆಂಡತಿ: ಅದು ಅಷ್ಟು ಮೊಂಡುತನದಿಂದ ಕೂಗ್ತಾ ಇರೋದನ್ನ ನೋಡಿದರೆ ಬಹುಷಃ ನಿಮ್ಮಮ್ಮ ಬರಬಹುದಂತ ಕಾಣಿಸುತ್ತದೆ.

★★★

ತಾಯಿ: ಲೋ ಮಗನೇ ಬೇಗ ಬಾರೋ ಸ್ಕೂಲ್‌ಗೆ ಲೇಟಾಗುತ್ತೆ.

ಮಗ: ಅಯ್ಯೋ ಅಮ್ಮ ಯಾಕಷ್ಟು ಅರ್ಜೆಂಟ್ ಮಾಡ್ತೀಯಾ? ಸಂಜೆಯವರೆಗೂ ಸ್ಕೂಲು ತೆರೆದಿರುತ್ತೆ, ಸುಮ್ಮನಿರು.

★★★

ಗುಂಡ: ಏನಮ್ಮಾ ನೀನು ರಿಜಿಸ್ಟರ್ ಮದುವೆ ಆಗೋಣಾಂತ ಹೇಳಿ ಮೋಸ ಮಾಡಿಬಿಟ್ಟೆಯಲ್ಲ.

ಹುಡುಗಿ: ಅಯ್ಯೋ ನೀನೇ ಬರಲಿಲ್ಲವಲ್ಲ, ನಾನೇನು ಮಾಡಲಿ?

ಗುಂಡ: ಸುಳ್ಳು ಹೇಳ ಬೇಡ! ನಾನು ಬೆಳಿಗ್ಗೆಯಿಂದಲೇ ಪೋಸ್ಟ್ ಆಫೀಸ್ ಬಳಿ ಕಾಯ್ತಾ ಇದ್ದೆ ಗೊತ್ತಾ?

**(ಸಂಗ್ರಹ) ಇಂದಿರಾಸುತ ಬೆಂಗಳೂರು**

ವಿವೇಕ್: ಹೆಂಡತಿಗೆ ಕಿರುಕುಳ ನೀಡಿದ ಅಪರಾಧದ ಮೇರೆಗೆ ನಮ್ಮ ಮನೋಹರನನ್ನು ಪೊಲೀಸ್ ಬಂಧಿಸಿದ್ದರಂತಲ್ಲ?

ವಿಜಯ್: ಹೌದು. ತವರು ಮನೆಗೆ ತೆರಳಿ ಹತ್ತು 2000 ರೂಪಾಯಿ ನೋಟುಗಳಿಗೆ ಚಿಲ್ಲರೆ ತರಲೇ ಬೇಕೆಂದು ಒತ್ತಾಯಿಸಿದ್ದಾನೆ ಅವನು.

★★★

ಮನೆ ಮಾಲೀಕ: ಬ್ರಹ್ಮಚಾರಿಗಳಿಗೆ ಬಾಡಿಗೆಗೆ ಮನೆ ಕೊಡಲ್ಲ.

ಮನೆ ಕೇಳಿ ಬಂದವನು: ಒಳ್ಳೆಯದು ಸರ್. ನಿಮ್ಮ ಮಗಳನ್ನು ಕುಟುಂಬಸ್ಥನಿಗೇ ಮದುವೆ ಮಾಡಿ ಕೊಡಬೇಕಿತ್ತು. ಬ್ರಹ್ಮಚಾರಿಯ ಜತೆ ಯಾಕೆ ಮಾಡಿದ್ದೀರಿ?

★★★

ಶ್ರೀಕಾಂತ್: ಹೊಸ 2000 ರೂಪಾಯಿಯನ್ನು ತೆಗೆದು ಕೊಂಡು ಆ ಡಾಕ್ಟರ್ ಬಳಿ ಮಾತ್ರ ಹೋಗಬಾರದು ಗುರು.

ಮಂಜು: ಯಾಕೆ....... ಏನಾಯಿತು?

ಶ್ರೀಕಾಂತ್: ಚಿಕಿತ್ಸೆ ನೀಡಿದ ನಂತರ, ಚಿಲ್ಲರೆಯಿಲ್ಲವೆಂದು ಉಳಿದ ಹಣಕ್ಕೆಲ್ಲ ಮಾತ್ರೆಗಳನ್ನು ಬರೆದು ಕೊಟ್ಟು ಬಿಡುತ್ತಾರೆ.

★★★

ರೋಹಿತ್: 30 ರೂಪಾಯಿಗೆ ಎಳನೀರು ಕುಡಿದು ಎಳನೀರು ಮಾರುವವನತ್ತ 'ಸ್ವೈಪಿಂಗ್ ಮಷೀನ್' ಇದೆಯೇ ಅಂತ ಕೇಳೋಕೆ ಭಯವಾಯಿತು.

ಸಂತೋಷ್: ಯಾಕೆ.... ಏನಾಯಿತು?

ರೋಹಿತ್: ಅವನ ಕೈಯಲ್ಲಿ ದೊಡ್ಡ ಕುಡುಗೋಲು ಇತ್ತಲ್ಲಾ.

★★★

ರಾಣಿ: ಯಾಕೆ ವನಿತ ನಿನ್ನ ಅತ್ತೆಯನ್ನು ವೃದ್ಧಾಶ್ರಮಕ್ಕೆ ಸೇರಿಸಿಬಿಟ್ಟೆ?

ವನಿತ: ಅವರು ಜಗಳವಾಡುವ ಶಕ್ತಿಯನ್ನು ಕಳೆದು ಕೊಂಡಿದ್ದಾರೆಂದು ಡಾಕ್ಟರ್ ಹೇಳಿದರು, ಅದಕ್ಕೆ.

★★★

ವಾಸು: ನಿನ್ನ ಸೆಲ್ ಫೋನ್ ಯಾಕೆ ಪದೇ ಪದೇ ಕೆಳಗೆ ಬೀಳುತ್ತಿದೆ?

ರಘು: ಅದರಲ್ಲಿ ಬ್ಯಾಲೆನ್ಸ್ ಇಲ್ಲ ಅದಕ್ಕೆ.

★★★

ವಿಕ್ರಂ: ಮಂಗಳ ಗ್ರಹದಲ್ಲಿ ನೀರೂ ಐಸ್ ಗಡ್ಡೆಯೂ ಕಾಣುತ್ತವೆ ಅಂತೆ. ವಿಜ್ಞಾನಿಗಳು ಹೇಳಿದ್ದಾರೆ.

ವಿನಾಯಕ್: ಅಷ್ಟು ಸಿಕ್ಕರೆ ಸಾಕು ಮಚ್ಚಾ.ಇಲ್ಲಿಂದ ನಾವು ವಿಸ್ಕಿ ಮತ್ತು ಸ್ನೈಡ್ಸ್ ತಗೊಂಡ್ ಹೋಗೋಣ. ಇದಕ್ಕೆಲ್ಲಾ ವಿಜ್ಞಾನಿಗಳ ನೆರವು ಕಾಯಕಾಗುತ್ತಾ?

**(ಸಂಗ್ರಹ)ಡಾ.ವಿ.ಪುಗಳೇಂದಿ, ಬಳ್ಳಾರಿ**



